**ದಿನಾಂಕಃ 30.05.2024 ರಂದು ಸಾಕ್ಷಿಯನ್ನು ಪುನಃ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀಸವಾಲುಃ ಎದುರುದಾರರ ಪರ ವಕೀಲರಾದ ಶ್ರಿ. ಎಸ್ ಆರ್ ವಕೀಲರಿಂದಃ**

P & SC 13/2022 ರಲ್ಲಿ ಎದುರುದಾರರು ಏನು ಹೇಳಿದ್ದಾರೆ ಎಂದು ನಾನು ಓದಿ ತಿಳಿದುಕೊಂಡಿದ್ದೇನೆ. ಆ ಅರ್ಜಿಯಲ್ಲಿ ಎದುರುದಾರರ ನನ್ನ ತಂದೆ ತಾಯಿ ಮತ್ತು ಎಲ್ಲಾ ಸಹೋದರ ಹಾಗೂ ಸಹೋದರಿಯರ ಬಗ್ಗೆ ಹೇಳಿದ್ದಾರೆ ಎನ್ನುವುದು ಸರಿಯಲ್ಲ, ಕೆಲವು ಅಂಶಗಳನ್ನು ಮುಚ್ಚಿಟ್ಟಿದ್ದಾರೆ. ನಮ್ಮ ತಂದೆತಾಯಿಗೆ ನಾವು 4 ಜನ ಮಕ್ಕಳು. ನಾನು , ಎದುರುದಾರರು ಮತ್ತು ಇಬ್ಬರು ಸಹೋದರಿಯರು ಇದ್ದೇವೆ. ಈ ವಿಚಾರವನ್ನು ಎದುರುದಾರ P & SC ಅರ್ಜಿಯಲ್ಲಿ ತಿಳಿಸಿದ್ದಾರೆ ಎಂದರೆ ಸರಿಯಲ್ಲ. ನಾನು ಹುಟ್ಟಿ ಬೆಳೆದಿರುವುದು ಮೈಸೂರಿನಲ್ಲಿ ಎನ್ನುವುದು ಸರಿ.

2. ನಾನು ಇಂಜೀನಿಯರಿಂಗ್ ಕಲಿತು ಕಾಂಟ್ರಾಕ್ಟ ಕೆಲಸ ಮಾಡುತ್ತಿದ್ದೇನೆ ಎಂದರೆ ಸರಿ. ನನ್ನ ತಂದೆ ತಾಯಿ ಮೃತಪಟ್ಟ ನಂತರ ಆಸ್ತಿಯ ವಿಭಾಗ ಕೇಳಿ ನನ್ನ ವಿರುದ್ಧ ನನ್ನ ಸಹೋದರಿಯರು ಕೇಸ್ ಹಾಕಿದ್ದರು ಎನ್ನುವುದು ಸರಿ. ಆ ಕೇಸ್ ನಲ್ಲಿ ನನ್ನ ಸಹೋದರಿಯರ ಪರವಾಗಿ ತೀರ್ಮಾನ ಆಯಿತು ಎನ್ನುವುದು ಸರಿಯಲ್ಲ. ವಿಚಾರಣಾ ನ್ಯಾಯಾಲಯದಲ್ಲಿ ನನ್ನ ಪರವಾಗಿ ತೀರ್ಮಾನ ಆಗಿ , ಮೇಲ್ಮನವಿಯಲ್ಲಿ ನನ್ನ ಸಹೋದರಿಯರ ಪರವಾಗಿ ತೀರ್ಮಾನ ಆಯಿತು. ನಾನು ಮೇಲ್ಮನವಿಯ ತೀರ್ಪನ್ನು ಪ್ರಶ್ನಿಸಿ ಮಾನ್ಯ ಉಚ್ಛ ನ್ಯಾಯಾಲಯದಿಂದ ತಡೆ ಆಜ್ಞೆ ಪಡೆದಿದ್ದೆ. ನಂತರ 2014 ರಲ್ಲಿ ಆ ಕೇಸ್ ರಾಜಿ ಆಗಿದೆ. ಈ ಕೇಸ್ ಗಳು ವಿಚಾರಣೆಯಲ್ಲಿರುವಾಗ ನನ್ನ ಅಕ್ಕ ಯಾಸ್ಮೀನ್ ಮತ್ತು ಎದುರುದಾರರ ಹೆಂಡತಿ ನನ್ನ ಮೇಲೆ ದೂರು ಕೊಟ್ಟಿದ್ದರು ಎಂದರೆ ಸರಿಯಲ್ಲ. ಪೊಲೀಸ್ ಠಾಣೆಯಲ್ಲಿ

ಯಾಸ್ಮೀನ್‌ರವರು ಕೊಟ್ಟ ದೂರಿನ ಮೇಲೆ ದಿಃ 21.01.2012 ರಲ್ಲಿ ನಾನು ಪೊಲೀಸರ ಮುಂದೆ ಹೇಳಿಕೆ ಕೊಟ್ಟಿದ್ದೇನೆ ಎನ್ನುವುದು ಸರಿ. ಹಲವಾರು ಬಾರಿ ನನ್ನ ಅಕ್ಕ ಮತ್ತು ಎದುರುದಾರರ ನನ್ನ ಮೇಲೆ ಪೊಲೀಸರಿಗೆ ದೂರು ಕೊಟ್ಟಿದ್ದರು ಎನ್ನುವುದು ಸರಿ. ಅವರು ಸುಳ್ಳು ದೂರುಗಳನ್ನು ಕೊಡುತ್ತಿದ್ದರು ಎಂದು ಸಾಕ್ಷಿ ಸ್ವತಃ ಹೇಳುತ್ತಾರೆ.

3. ನಾನು ನಿರ್ವಹಿಸಿದ ಕಾಂಟ್ರ್ಯಾಕ್ಟ ಕೆಲಸದ ಬಗ್ಗೆ ಪತ್ರಿಕೆಯಲ್ಲಿ ಸುದ್ದಿ ಪ್ರಸಾರವಾಗಿತ್ತು ಎಂದರೆ, ಅದು ಈ ಕೇಸಿಗೆ ಸಂಬಂಧಪಡುವುದಿಲ್ಲ ಎಂದು ಸಾಕ್ಷಿ ಹೇಳುತ್ತಾರೆ. ಕೆ ಆರ್ ಮೊಹಲ್ಲಾದ ಮದ್ವಾಚಾರ್ಯ ರಸ್ತೆಯ ಆಸ್ತಿ ನಂ. 2695 ರಿಂದ 2698 ರವರೆಗಿನ ಆಸ್ತಿ ನನ್ನ ತಾಯಿಗೆ ಸೇರಿದ್ದು ಎನ್ನುವುದು ಸರಿ. ಈ ಆಸ್ತಿಯ ಬಗ್ಗೆ 30.04.1992 ರಂದು ನನ್ನ ಹೆಸರಿಗೆ ಗಿಫ್ಟ್ ಡೀಡ್ ಆಗಿದೆ ಎನ್ನುವುದು ಸರಿ. ಈ ಗಿಫ್ಟ ಡೀಡ್ ನೋಟರಿಯವರ ಎದುರಿಗೆ ಆಗಿದ್ದು ನೊಂದಣಿ ಆಗಿಲ್ಲ ಎನ್ನುವುದು ಸರಿ. ನನ್ನ ಅಕ್ಕ ಯಾಸ್ಮೀನ್ ಜೆ ಸಿ ಕಾಲೇಜಿನಲ್ಲಿ ಕೆಲಸ ಮಾಡುವುದು ನನಗೆ ಗೊತ್ತಿದೆ. ಕಮಲಾ ಪ್ರಭು ಶಂಕರ ಮತ್ತು ಮಹೇಶ್ ಆರ್ ಯಾಶ್ಮೀನ್ ರವರ ಜೊತೆ ಕೆಲಸ ಮಾಡುತ್ತಿದ್ದರು ಎಂದರೆ ನನಗೆ ಗೊತ್ತಿಲ್ಲ. ನಮ್ಮ ಮನೆಯ 2 ಕ್ರಾಸ್ ನಂತರಿ ಪಬ್ಲಿಕ್ ಲೈಬ್ರರಿ ಇದೆ ಎಂದರೆ ನನಗೆ ಗೊತ್ತಿಲ್ಲ. ನಾನು ಲೈಬ್ರರಿಗೆ ಹೋಗುವ ಅಭ್ಯಾಸ ಹೊಂದಿದ್ದೇನೆ ಎಂದರೆ ಸರಿಯಲ್ಲ. P & Sc 13/2022 ನ್ನು ಎದುರುದಾರರು ಹಾಕಿದ ವಿಚಾರ ನನಗೆ ಗೊತ್ತಿತ್ತು ಎಂದರೆ ಸರಿಯಲ್ಲ.

4. ಯಾಸ್ಮೀನ್ ಮೃತಪಟ್ಟ ನಂತರ ಯಾಸ್ಮೀನ್ ರವರ ಆಸ್ತಿಯ ವಿಭಾಗ ಕೋರಿ ನಾನು ಯಾವುದೇ ನೋಟಿಸನ್ನು ಎದುರುದಾರರಿಗೆ ಕೊಟ್ಟಿಲ್ಲ ಎನ್ನುವುದು ಸರಿ. ಆಸ್ತಿ ವಿಭಾಗ ಕೇಳಿ ನಾನು ಯಾವುದೇ ಕೇಸ್ ಹಾಕಿಲ್ಲ ಎನ್ನುವುದು ಸರಿ.

**ಮುಂದುವರೆದ ಪಾಟೀಸವಾಲನ್ನು ವಿನಂತಿಯ ಮೇರೆಗೆ ಮುಂದೂಡಲಾಯಿತು.**

ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.

ಓ ಹೇ ಕೇ ಸ ಇ ಎ ಒ.,

30.05.2024

(ರವೀಂದ್ರ ಹೆಗಡೆ)
ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ಮೈಸೂರು.